<u>ಸಾಕ್ಷಿಗೆ ದಿ:22.02.2025 ರಂದು ಪ್ರಮಾಣ ವಚನ ಭೋದಿಸಲಾಯಿತು</u>

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಟಿ ಪಿ ವಕೀಲರಿಂದ:</u>**

7. ಈಗ ನಾನು ನಿಡಿ-1 ನೊಂದಾಯಿತ ಕ್ರಯದ ಕರಾರು ಪತ್ರವನ್ನು ನೋಡುತ್ತಿದ್ದು ಅದರಲ್ಲಿ ನನ್ನ, ನನ್ನ ಹೆಂಡತಿ, ನನ್ನ ಮಗ ಮತ್ತು ನನ್ನ ಸೊಸೆಯ ಫೋಟೋಗಳು ಇರುತ್ತವೆ. ತಾವು ಉಪನೊಂದಣಿ ಕಛೇರಿಗೆ ಹೋಗಿದ್ದಿರಾ ಎಂದರೆ ಸರಿ. ಬೆದರಿಕೆ ಹಾಕಿ ನನ್ನನ್ನು ಕರೆದುಕೊಂಡು ಹೋದರು ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-1 ಇದು 2013 ರದ್ದು ಇರುತ್ತದೆ. ನಿಡಿ-1 ನ್ನು ಮೊಸದಿಂದ ಹಾಗೂ ಬಲವಂತದಿಂದ ಬರೆಸಿಕೊಂಡಿದ್ದಾರೆ ಎಂದು ನಾನು ದೂರು ನೀಡಿರುತ್ತೇನೆ. ಸದರಿ ದೂರಿನ ಪ್ರತಿಯನ್ನು ಈ ಪ್ರಕರಣದಲ್ಲಿ ಪೋಲಿಸರಿಗೆ ನೀಡಿರುತ್ತೇನೆ. ನಾನು ಆ ರೀತಿ ದೂರು ಕೊಡದೇ ಇದ್ದರೂ ಸಹ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ದಾಖಲಾತಿಗೆ ತಾವು ಸಹಿಗಳನ್ನು ಹಾಕಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ಬಲವಂತದಿಂದ ನಮ್ಮ ಸಹಿಗಳನ್ನು ಪಡೆದರು ನಮಗೆ ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. ಅಂದು ತಾವು ಉಪನೊಂದಣಿ ಅಧಿಕಾರಿಗೆ ಈ ಬಗ್ಗೆ ದೂರು ಕೊಟ್ಟಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮಗೆ ಬಲವಂತವಾಹಿ ಸಹಿ ಪಡೆದರು ಮಾತನಾಡಲು ಬಿಡಲಿಲ್ಲ ಎಂದು ಹೇಳುತ್ತಾರೆ. ಸದರಿ ನಿಡಿ-1 ನ್ನು ಪ್ರಶ್ನಿಸಿ ನಾನು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹಾಕಿಲ್ಲ. ನಿಡಿ-1 ಕ್ಕೆ ಸಂಬಂಧಪಟ್ಟಂತೆ ನಮ್ಮ ವಿರುದ್ಧ ಆರೋಪಿಯು ಸಿವಿಲ್ ಕೇಸನ್ನು ಹಾಕಿರುತ್ತಾರೆ ಅದು ಇನ್ನೂ ಚಾಲ್ತಿಯಲ್ಲಿರುತ್ತದೆ.

8. ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ 2013 ನೇ ಸಾಲಿನಲ್ಲಿ ವೆಂಕಟೇಶಪ್ಪ ಮತ್ತು ನಾರಾಯಣಸ್ವಾಮಿ ಇಬ್ಬರು ನಮಗೆ ನಮ್ಮ ಹಣ ವಾಪಸ್ ಕೊಡಿ ಎಂತ ಹೇಳುತ್ತಿದ್ದರು, ಆಗ ನಮ್ಮ ಬಳಿ ಹಣ ಇಲ್ಲದ ಕಾರಣ ನಮ್ಮ ಮನೆಯನ್ನು 28 ಲಕ್ಷ ರೂಗಳಿಗೆ ವ್ಯಾಪಾರ ಮಾಡಿ ದಿ.6-02-2013 ನೇ ಸಾಲಿನಲ್ಲಿ ನಾರಾಯಣಸ್ವಾಮಿರವರ ಹೆಂಡತಿ ಕವಿತಾ ಮತ್ತು ವೆಂಕಟೇಶ್ ರವರ ಹೆಸರಿಗೆ ಬನ್ನೇರುಘಟ್ಟ ಸಬ್ ರಿಜಿಸ್ಟ್ರಾರ್

ಕಛೇರಿಯಲ್ಲಿ ನಮ್ಮ ಮನೆಯನ್ನು ಕ್ರಯ ಮಾಡಿಸಿಕೊಟ್ಟಿರುತ್ತೇವೆ, ಈ ಕ್ರಯ ಪತ್ರಕ್ಕೆ ನಮ್ಮ ಕುಟುಂಬದವರೆಲ್ಲರೂ ಸಹಿ ಮಾಡಿರುತ್ತೇವೆ, ನಮ್ಮ ಮನೆಯನ್ನು ರಿಜಿಸ್ಟರ್ ಮಾಡಿಕೊಟ್ಟ ನಂತರ ನಾವು ಮನೆ ಖಾಲಿ ಮಾಡಲು 6 ತಿಂಗಳ ಕಾಲಾವಕಾಶ ತೆಗೆದುಕೊಂಡಿದ್ದೆವು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-5 ಎಂದು ಗುರುತಿಸಲಾಯಿತು.

9. ನನ್ನ ಮಗನ ವಿರುದ್ಧ ಆರೋಪಿಯು ಚೆಕ್ ಅಮಾನ್ಯವಾದ ಕುರಿತು ಖಾಸಗಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಚೆಕ್ ಅಮಾನ್ಯವಾದ ಪ್ರಕರಣವನ್ನು ಹಾಕುವುದಕ್ಕಿಂತ ಮೊದಲು ನನ್ನ ಮಗನಿಗೆ ಆರೋಪಿಯು ನೊಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ನೋಟೀಸ್ ನನ್ನ ಮಗನಿಗೆ ಬಂದ ನಂತರವೇ ನಾವುಗಳು ನನ್ನ ಹೆಂಡತಿಯ ಮುಖಾಂತರ ನಾನು ಈ ಸುಳ್ಳು ದೂರನ್ನು ಆರೋಪಿಯ ವಿರುದ್ಧ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ರಂತೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟು ಆರೋಪಿಯಿಂದ ಹಣ ಪಡೆದು ಮನೆಯನ್ನು ಖಾಲಿ ಮಾಡಿಕೊಡದೇ ಹಾಗೂ ಖರೀದಿ ಪತ್ರವನ್ನು ಬರೆದುಕೊಡದೇ ಆರೋಪಿಯು ಈ ಬಗ್ಗೆ ಬಂದು ನಮಗೆ ಕೇಳಿದ್ದಕ್ಕೆ ಪ್ರತೀಕಾರವಾಗಿ ನಾನು ನನ್ನ ಹೆಂಡತಿಯ ಮುಖಾಂತರ ಈ ಸುಳ್ಳು ದೂರನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ನೀಡಲಾಗಿದೆ ಎಂದು ಅಪಾದಿಸಿ ಆರೋಪಿಯು ಪೋಲಿಸ್ ಕಮೀಷನರ್ ಹಾಗೂ ಮಾನವ ಹಕ್ಕು ಆಯೋಗ ಹಾಗುಾ ಗೃಹ ಸಚಿವಾಲಯಕ್ಕೆ ದೂರನ್ನು ಕಳುಹಿಸಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ರೀತಿ ಕಳುಹಿಸಿಕೊಟ್ಟ ದೂರು ಸುಳ್ಳು ಇರುತ್ತವೆ ಎಂದು ಹೇಳುತ್ತಾರೆ.

10. ಘಟನೆಯಾಗಿದೆ ಎಂದು ಹೇಳುವ ದಿನಾಂಕ 19.05.2015 ಇರುತ್ತದೆ. ಗಲಾಟೆಯಾಗಿದೆ ಎಂದು ಹೇಳಿದ ದಿನ ನಮ್ಮ ಮನೆಯವರು ಯಾರೂ ಸಹ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ 100 ಫೋನ್ ಮಾಡಿ ತಿಳಿಸಿದ್ದೆವು, ಮಾರನೇ ದಿನ ನಾನು, ನನ್ನ ಹೆಂಡತಿ ಹಾಗೂ ನನ್ನ ಮಗ ಹೋಗಿ ಬನ್ನೇರುಘಟ್ಟ ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೆವು ಎಂದು ಹೇಳುತ್ತಾರೆ. ದೂರು ಕೊಟ್ಟ ಸಮಯ ನನಗೆ

ನೆನಪಿಲ್ಲ. ದೂರು ಕೊಟ್ಟ ದಿನವೇ ಪೋಲಿಸರು ನಿಮ್ಮ ಹೇಳಿಕೆ ಪಡೆದಿದ್ದರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾವು ಬನ್ನೇರುಘಟ್ಟ ಪೋಲಿಸ್ ಠಾಣೆಗೆ ದೂರು ಕೊಡಲು ಹೋದಾಗ ಅವರು ದೂರು ತೆಗೆದುಕೊಳ್ಳಲಿಲ್ಲ, ನಂತರ ನಾವು ಎಸ್ಪಿ ಯವರಿಗೆ ಹೋಗಿ ದೂರು ಕೊಟ್ಟಾಗ ಸದರಿ ದೂರನ್ನು ಕಳುಹಿಸಿಕೊಟ್ಟರು ನಂತರ ಪೋಲಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡರು. ಠಾಣೆಯಲ್ಲಿ ಹೇಳಿಕೆಯ ದೂರನ್ನು ಪೋಲಿಸರು ಬರೆದುಕೊಂಡರು.

(ಈ ಹಂತದಲ್ಲಿ ಬೆಳಗಿನ ಸಮಯ ಮುಗಿದಿದ್ದರಿಂದ ಮುಂದುವರಿದ ಪಾಟೀ ಸವಾಲಿಗಾಗಿ ಮಧ್ಯಾಹ್ನಕ್ಕೆ ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**<u>ಸಾಕ್ಷಿಗೆ ಮಧ್ಯಾಹ್ನ ಪುನಃ ಪ್ರಮಾಣ ವಚನ ಭೋದಿಸಲಾಯಿತು</u>**

ಮುಂದುವರಿದ **ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಪಿ ವಕೀಲರಿಂದಃ**

11. ನಾನು, ನನ್ನ ಹೆಂಡತಿ ಹಾಗೂ ಮಗ ಬನ್ನೇರುಘಟ್ಟ ಪೋಲಿಸ್ ಠಾಣೆಗೆ ಹೋಗಿಲ್ಲ ಹಾಗೂ ಯಾವುದೇ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ದೂರಿನಲ್ಲಿ ನಾನು ಬನ್ನೇರುಘಟ್ಟಕ್ಕೆ ಹೋಗಿ ದೂರು ನೀಡಿದರೂ ಸಹ ಪೋಲಿಸರು ದೂರನ್ನು ತೆಗೆದುಕೊಳ್ಳದ ವಿಚಾರವನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಪ್ರ.ವ.ವರದಿ ಆದ

ನಂತರ ನಾನು ಪೋಲಿಸ್ ಠಾಣೆಗೆ ಹೋಗಿಲ್ಲ. ನನ್ನ ಮಗನೂ ಹೋಗಿಲ್ಲ. ನನ್ನ ಹೆಂಡತಿ ಠಾಣೆಗೆ ಪ್ರ.ವ.ವರದಿ ತೆಗೆದುಕೊಂಡು ಬರಲು ಹೋಗಿದ್ದಳು. ನಂತರ ಪೋಲಿಸರು ಕರೆಯಲಿಲ್ಲ ನಾವು ಠಾಣೆಗೆ ಹೋಗಲಿಲ್ಲ.

12. ನಾನು ನನ್ನ ಮುಖ್ಯ ವಿಚಾಣೆಯಲ್ಲಿ ಹೇಳಿದಂತೆ, ಆರೋಪಿ ಹಾಗೂ ನಾನು ಕಲ್ಲು ಬಂಡೆ ಕುರಿತಂತೆ ವ್ಯವಹಾರ ಮಾಡಿದ್ದೆವು ಹಾಗೂ ನಾನು ಆರೋಪಿಯಿಂದ ಹತ್ತು ಲಕ್ಷ ಹಣ ಪಡೆದಿದ್ದೆವು ಹಾಗೂ ಸದರಿ ಹಣದಲ್ಲಿ ಆಳುಗಳಿಗೆ ಸ್ವಲ್ಪ ಸ್ವಲ್ಪ ಹಣ ಕೊಟ್ಟಿದ್ದೆನು ಹಾಗೂ 50 ಸಾವಿರ ಹಾಗೂ 1 ಲಕ್ಷಗಳಂತೆ ಕೆಲವು ಬಾರಿ ಹಣ ನೀಡಿದ್ದೆನು ಹಾಗೂ ಉಳಿದ ಹಣವನ್ನು ಆಳುಗಳಿಗೆ ಕೊಟ್ಟಿದ್ದೆನು. ಆಳುಗಳೆಲ್ಲಾ ಕೆಲಸ ಬಿಟ್ಟು ಓಡಿ ಹೋಗಿದ್ದರು ಹಾಗೂ ಆರೋಪಿಯು ನನಗೆ ಕಾಸು ಕೊಡು ಇಲ್ಲ ಬಡ್ಡಿ ಹಣ ಕೊಡು ಎಂದು ಕೇಳಿದ್ದರು ಹಾಗೂ ನಾನು ಸುಮಾರು 25 ತಿಂಗಳು ಬಡ್ಡಿ ಹಣವನ್ನು ಆರೋಪಿಗೆ ಕೊಟ್ಟಿದ್ದೆನು ಹಾಗೂ ನಂತರ ನನ್ನ ಮಗನಿಗೆ ಅಪಘಾತವಾಗಿತ್ತು ಹಾಗೂ ಪುನಃ ಆರೋಪಿ ಬಂದು ನನಗೆ ಬಡ್ಡಿ ಹಣವನ್ನು ಕೇಳಿದ್ದನು ನನಗೆ ಹಣ ಕೊಡಲಾಗಿರಲಿಲ್ಲ ಹಾಗೂ ದುಡ್ಡು ಕೊಡದೇ ಇದ್ದುದರಿಂದ ಆರೋಪಿ ನಮ್ಮ ಮನೆಗೆ ಬಂದು ಗಲಾಟೆ ಮಾಡಿದ್ದನು ಎಂದು ನಿಪಿ-1 ದೂರಿನಲ್ಲಿ ಹಾಗೂ ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

13. ನಾನು ನನ್ನ ಮುಖ್ಯ ವಿಚಾಣೆಯಲ್ಲಿ ಹೇಳಿದಂತೆ,ಆರೋಪಿ ನನ್ನ ಮಗ ಈಗಾಗಲೇ ಅಪಘಾತದಲ್ಲಿ ಗಾಯಗೊಂಡಿದ್ದವನ ಕಾಲನ್ನು ತಿರುವಿದನು ಹಾಗೂ ಆರೋಪಿ ನನ್ನ ತಲೆಗೆ ಹೊಡೆಯಲು ಬಂದಿದ್ದನು ಹಾಗೂ ನಾನು ಕುಳಿತುಕೊಂಡಿದ್ದೆನು ಆರೋಪಿ ನನಗೆ ಕೋಲಿನಿಂದ ಹೊಡೆದಿದ್ದನು ಹಾಗೂ ನಾನು ಸ್ಟೇಷನ್ ಗೆ ಫೋನ್ ಮಾಡಿದ್ದೆನು ಹಾಗೂ ನನ್ನನ್ನು ಮನೆಯಿಂದ ಹೊರಗೆ ಹಾಕಿ ಬೀಗ ಹಾಕಿದ್ದಾನೆ ಎಂದು ಫೋನ್ ಮಾಡಿದ್ದೆನು ಹಾಗೂ ನಾವು ಮೂರು ದಿನ ದೇವಸ್ಥಾನದಲ್ಲಿ ಕುಳಿತುಕೊಂಡಿದ್ದೆವು ಎಂದು ನಿಪಿ-1 ದೂರಿನಲ್ಲಿ ಹಾಗೂ ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

14. ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆಯಲಿಲ್ಲ. ಸಾಕ್ಷಿ ಮುಂದುವರಿದು ಮನೆಯಲ್ಲಿಯೇ ಸುಧಾರಿಸಿಕೊಂಡೆನು. ನನ್ನ ಮಗನ ಕಾಲು ತಿರುಚಲಾಗಿದೆ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಆ ಬಗ್ಗೆ ನನ್ನ ಮಗನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಲಿಲ್ಲ ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯು ನನಗೆ ಹೊಡೆಯಲಿಲ್ಲ ಹಾಗೂ ನನ್ನ ಮಗನ ಕಾಲು ತಿರುಚಲಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಗೆ ಫೋನ್ ಮಾಡಿಲ್ಲ ನನ್ನ ಮಗ ಪೋಲಿಸರಿಗೆ ಫೋನ್ ಮಾಡಿದ. ನನ್ನ ಮಗನ ಮೊಬೈಲ್ ನಂಬರ್ ನನಗೆ ಹೇಳಲು ಬರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿ ನಮ್ಮೊಂದಿಗೆ ಗಲಾಟೆ ಮಾಡಿಲ್ಲ ಹಾಗೂ ನನಗೆ ಹೊಡೆದಿಲ್ಲ ಹಾಗೂ ನನ್ನ ಮಗನ ಕಾಲು ತಿರುಚಿಲ್ಲ ಹಾಗೂ ನಮಗೆ ಅಸಭ್ಯವಾಗಿ ಬೈದಿಲ್ಲ ಹಾಗೂ ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಹಣವನ್ನು ಪಡೆದು ಖರೀದಿ ಪತ್ರವನ್ನು ಮಾಡಿಕೊಡದೇ ಹಣವನ್ನು ವಾಪಸ್ಸು ಕೊಡದೇ ಹಾಗೂ ಮನೆಯನ್ನು ಖಾಲಿ ಮಾಡಿಕೊಡದೇ ಅವರ ವಿರುದ್ದ ಸುಳ್ಳು ಕೇಸ್ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾಣೆಃಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು